







ಸೆಳೆಯಿತು. ಅದೇ 'ಸ್ಯಾಂಚುರಿ ಆಫ್ ಟ್ರುಥ್' ಎಂದು ನಮ್ಮ ಮಾರ್ಗದರ್ಶಿ ದೂರದಿಂದಲೇ ಬೆರಳು ತೋರಿ ವಿವರಣೆ ನೀಡತೊಡಗಿದಳು.

'ಸ್ಯಾಂಚುರಿ ಆಫ್ ಟ್ರುಥ್' ಸುಮಾರು 35,000 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ ವಿಶಿಷ್ಟ ಕಲಾಕೃತಿಗಳು, ಕೆತ್ತನೆಗಳಿಂದ ಕೂಡಿದ ಬೃಹತ್ ದೇವಾಲಯ ಸಮುಚ್ಚಯ. ಇದೊಂದು ವಸ್ತುಸಂಗ್ರಹಾಲಯವೇ ಸರಿ. ಈ ಸಂಕೀರ್ಣವನ್ನು ಥಾಯ್ ಭಾಷೆಯಲ್ಲಿ 'ವ್ಯಾಟ್ ಬೋರಾನ್' (Wat Boran) ಎಂದು ಕರೆಯಲಾಗುತ್ತದೆ.

ಕ್ರಿ.ಶ.1781ರಲ್ಲಿ ಥಾಯ್ಲಂಡಿನ ಅತಿ ದೊಡ್ಡ ಶ್ರೀಮಂತ ಹಾಗೂ ಕಲಾಪ್ರೇಮಿ ಖಿನ್ ಲೇಕ್ ವಿರಿಯಫಾಂತ್ ಎಂಬಾತ, ಶ್ರೀಮಂತ ಥಾಯ್ ಪರಂಪರೆಯನ್ನು ರಕ್ಷಿಸಲು ಈ ದೇವಾಲಯ ಸಮುಚ್ಚಯ ನಿರ್ಮಿಸಿದ ಎನ್ನುತ್ತದೆ ಇತಿಹಾಸ. ಮುಖ್ಯವಾಗಿ ಪುರಾತನ ಭೂಮಿಯ ದೃಷ್ಟಿಕೋನ, ಪುರಾತನ ಜ್ಞಾನ ಮತ್ತು ಪೌರ್ವಾತ್ಯ ತತ್ವಜ್ಞಾನಗಳ ಕಡೆಗೆ ಗಮನ ಸೆಳೆಯುವುದು ಆತನ ಗುರಿಯಾಗಿತ್ತು. ಈ ಹಿನ್ನೆಲೆಯಲ್ಲೇ ಆಧ್ಯಾತ್ಮ, ಪ್ರಾಚೀನ ಜೀವನ, ಮಾನವ ಹೊಣೆಗಾರಿಕೆ, ಮೂಲ ಚಿಂತನೆಗಳು, ಜೀವನದ ಸಾಮಾನ್ಯ ಗುರಿಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದಾತ ಬಯಸಿದ್ದ. ಈತ ಮುವಾಂಗ್ ಬೊರಾನ್ ಎಂಬ ಪುರಾತನ ನಗರದ ಪ್ರತಿಕೃತಿಯೊಂದನ್ನೂ ನಿರ್ಮಿಸಿದ್ದು ಅದು ಬ್ಯಾಂಕಾಕಿನ ಇನ್ನೊಂದು ದಿಕ್ಕಿನಲ್ಲಿದೆ.

ಸುಮಾರು 330 ಅಡಿ ಎತ್ತರದ ಗೋಪುರ ಹೊಂದಿರುವ ಈ ದೇವಾಲಯವನ್ನು ಸಂಪೂರ್ಣವಾಗಿ ಮರದಿಂದ ನಿರ್ಮಿಸಲಾಗಿದೆ. ಖ್ಮೇರ್, ಚೀನೀ, ಕಾಂಬೋಡಿಯಾದ ಹಿಂದೂ ಮತ್ತು ಥಾಯ್ ವಾಸ್ತುಶಿಲ್ಪದ ಸಮ್ಮಿಲನವಾಗಿರುವ ಈ ಶಿಲ್ಪವೈಭವದ ನಾಲ್ಕು ಗೋಪುರಗಳು ನಾಲ್ಕು ದಿಕ್ಕುಗಳನ್ನು ಸೂಚಿಸುತ್ತವೆ. ದೇವಾಲಯದ ಪೂರ್ವಭಾಗದಲ್ಲಿ ಕಾಂಬೋಡಿಯ, ಚೀನಾ, ಭಾರತ ಮತ್ತು ಥಾಯ್ಲಂಡಿನ ಪೌರಾಣಿಕ ಪ್ರತಿಕೃತಿಗಳಿವೆ. ರಾಮಾಯಣದ ವಿವಿಧ ಪ್ರಸಂಗಗಳು, ಗರುಡ ಪುರಾಣ, ವಿಷ್ಣು ಪುರಾಣ ಹಾಗೂ ಮಹಾಭಾರತದ ವಿವಿಧ ಪ್ರಸಂಗಗಳನ್ನು ವಿಸ್ತಾರವಾಗಿ ಕೆತ್ತಲಾಗಿದೆ.

ಈ ದೇವಾಲಯ ವಿಶೇಷ ಏನೆಂದರೆ ಇಡೀ ದೇವಾಲಯವನ್ನು ಗಟ್ಟಿ ಮರದಿಂದ ನಿರ್ಮಿಸಲಾಗಿದ್ದರೂ ಜೋಡನೆಗೆ ಎಲ್ಲೂ ಕಬ್ಬಿಣದ ಮೊಳೆಯನ್ನು ಉಪಯೋಗಿಸಿಲ್ಲ ಎನ್ನುವುದು.

ದೇವಾಲಯದ ಸಮುಚ್ಚಯದ ಕೆಲಸಕಾರ್ಯಗಳು ಇನ್ನೂ ಮುಗಿದಿಲ್ಲ. ಸುಮಾರು 400ಕ್ಕೂ ಹೆಚ್ಚು ಕುಶಲ ಕರ್ಮಿಗಳು ದಿನವಿಡೀ ಕಟ್ಟಡ ನಿರ್ಮಾಣದಲ್ಲಿ ತೊಡಗಿಕೊಂಡಿದ್ದಾರೆ. ಸುಮಾರು 2025ರ ಹೊತ್ತಿಗೆ ನಿರ್ಮಾತೃನ ಕಲ್ಪನೆಯಂತೆ ಕಟ್ಟಡ ಸಮುಚ್ಚಯದ ಕೆಲಸ ಪೂರ್ಣಗೊಳ್ಳಲಿದೆ ಎನ್ನಲಾಗುತ್ತಿದೆ.

ಪಾವಟಿಗಳನ್ನು ಏರಿ ದೇವಾಲಯದದ ಒಳ ಪ್ರವೇಶಿಸುತ್ತಿದ್ದಂತೆಯೇ ಬೃಹತ್ ಕೊಠಡಿಯೊಂದು ನಮ್ಮನ್ನು ಸ್ವಾಗತಿಸುತ್ತದೆ. ಈ ವಿಶಾಲವಾದ ಕೊಠಡಿಯನ್ನು ನೋಬಲ್ ಹಾಲ್ (Noble Hall) ಎಂದು ಕರೆಯಲಾಗುತ್ತದೆ. ಈ ಸಭಾಂಗಣದಲ್ಲಿ ಗೌತಮ ಬುದ್ಧ ಬೋಧಿಸಿದ ಕೊನೆಯ ನಾಲ್ಕು ಸಂದೇಶಗಳಾದ, ದುಃಖ, ದುಃಖದ ಮೂಲ ಹಾಗೂ ಅಂತ್ಯ, ಸತ್ಯ ಪಥ, ಜೀವನದ ಗುರಿ– ನಿಬ್ಬಣದಗನ್ನು ಚಿತ್ರಗಳ ರೂಪದಲ್ಲಿ ಸುಂದರವಾದ ಕೆತ್ತಲಾಗಿದೆ.

ಮೇಲ್ಛಾವಣಿಯಲ್ಲಿ ಕೆತ್ತಲಾಗಿರುವ ಈ ಸತ್ಯ ಸಂದೇಶಗಳು– Truth of Suffering, Cause of Suffering, End of Suffering (ನಿರೋಧಾ) ಹಾಗೂ Path of Truh ಬಹಳ ಮನಮೋಹಕವಾಗಿ ಚಿತ್ರಿತಗೊಂಡಿವೆ. ಮುಖ್ಯ ಕೊಠಡಿಯನ್ನು ಸುತ್ತುವರೆದು ನಾಲ್ಕು ದಿಕ್ಕುಗಳಲ್ಲಿ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸಲಾಗಿದೆ.

ಮೊದಲನೇ ಕೊಠಡಿ ಪಂಚಭೂತ ಹಾಗೂ ತ್ರಿಮೂರ್ತಿಗಳನ್ನು ಸಂಕೇತಿಸುತ್ತದೆ. ಎರಡನೇ ಕೊಠಡಿ ಸೂರ್ಯ, ಚಂದ್ರ, ನಕ್ಷತ್ರಗಳು ಹಾಗೂ ಗ್ರಹಗಳು, ಮೂರನೇ ಕೊಠಡಿ ಮನುಷ್ಯ, ಜನನ, ಜೀವನ, ಆಧ್ಯಾತ್ಮ ಹಾಗೂ ಜೀವನದ ಗುರಿಯನ್ನು ಸಂಕೇತಿಸುತ್ತದೆ. ನಾಲ್ಕನೇ ಕೊಠಡಿಯಲ್ಲಿ ಬೌದ್ಧ ಧರ್ಮ, ಬೋಧಿಸತ್ವ, ಬುದ್ಧನ ಜನನ, ಕೇವಲ ಜ್ಞಾನ , ಉಪದೇಶ, ಜಾತಕ ಕಥೆಗಳ ಸುಂದರ ಕೆತ್ತನೆಗಳನ್ನು ಕಾಣಬಹುದು. ಮರದಲ್ಲಿನ ಜಾಲಾಂದ್ರ ಕೆತ್ತನೆ, ನೆರಳು– ಬೆಳಕಿನ ಆಟ ಸುಂದರವಾಗಿ ಕಾಣುತ್ತದೆ.

ಚಿತ್ರಕಲೆ ಹಾಗೂ ವಾಸ್ತುಶಿಲ್ಪದಲ್ಲಿ ಆಸಕ್ತಿ ಹೊಂದಿದವರು ಇಲ್ಲಿ ಇಡೀ ದಿನ ಕಳೆದರೂ ನೋಡಿ ಮುಗಿಯದಷ್ಟು ಕೆತ್ತನೆಗಳಿವೆ. ದೇವಾಲಯ ಬೆಳಗ್ಗೆ 8 ರಿಂದ ಸಂಜೆ 5ರವರಗೆ ಪ್ರವಾಸಿಗರಿಗೆ ತೆರೆದಿರುತ್ತವೆ. ಪ್ರವೇಶ ಶುಲ್ಕ ಮಕ್ಕಳಿಗೆ 250 ಬಾಟ್ (Bhat) ಹಾಗೂ ವಯಸ್ಕರಿಗೆ 500 ಬಾಟ್ (ಆಗಿದೆ) ಎಂದು ನಿಗದಿಪಡಿಸಲಾಗಿದೆ.